ಶ್ರೀ ಬಿ. ಸ್ವಾಮಿರಾವ್.—ಒಂದೇ ಒಂದು ವಿಷಯ.....

ಅಧ್ಯಕ್ಷರು.— ಸರಿ ಹೇಳಿ.

ಶ್ರೀ ಬಿ. ಸ್ವಾಮಿರಾವ್.— ೧೯೮೪ರಲ್ಲಿನೇ ಇಸವಿಯಲ್ಲಿ ಚುನಾವಣೆಗೆ ಮುನ್ನ ಎಲ್ಲಾ ಗೇಣಿದಾರರಿಗೆ ನಿಮ್ಮ ಪ್ರೀಮಿಯಮ್ ಅನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಕ್ಕೋಸ್ಕರ ಎಲ್ಲಾ ಜನರೂ ಕೂಡ ಮೋಸ ಹೋಗಿ ಇವರಿಗೆ ಓಟು ಕೊಟ್ಟಿದ್ದಾರೆ ಮತ್ತು ಈ ಬಗ್ಗೆ ತಮ್ಮ ಸ್ಪಷ್ಟವಾದ ಹೇಳಿಕೆ ಕೂಡ ಇದೆ. ಹತ್ತು ಎಕರೆ ಒಳಗೆ ಬರತಕ್ಕಂಥ ಡಿ. ಕ್ಲಾಸ್ ಜಮೀನಿನ ಒಡೆತನವನ್ನು ಹೊಂದಿರತಕ್ಕಂಥ ಗೇಣಿದಾರರಿಗೆ ಕೂಡ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರು. ಆವತ್ತು ಒಂದು ಮಾತ್ರ ಸಾಧ್ಯವಿಲ್ಲವೆಂದು ಹೇಳಿದ್ದರು. ಏನೆಂದರೆ, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಮಾಡಿ ಏನಾ ಕೊಟ್ಟಿದ್ದರಾ ಅಂತಹವರಿಗೆ ಮಾತ್ರ ಕೊಡುವುದಕ್ಕಾಗುವುದಿಲ್ಲ, ಅವರು ಕೊಡಲೇ ಬೇಕಾಗುತ್ತದೆ ಎಂದು. ಮುಂದೆ ಮನ್ನಾ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಎಲ್ಲಾ ಜಮೀನಿಗೂ. ಯಾವ ಜಮೀನಿಗೂ ಸೌಲಭ್ಯ ಸಿಗದೇ ಇರತಕ್ಕಂಥ ಪರಿಸ್ಥಿತಿಯನ್ನು ತಂದೊಡ್ಡಿದ್ದಾರೆ. ಈಗಾಗಲೇ ಎರಡು ಎಕರೆ ಮೂರು ಎಕರೆ ಜಮೀನು ಇರುವುದನ್ನು ಜಪ್ತಿ ಮಾಡಿದ್ದಾರೆ, ಹರಾಜು ಕೂಡ ಆಗಿದೆ, ಇಂತಹ ನಾಲ್ಕಾರು ಕೇಸುಗಳು ಇವೆ. ಇಂತಹವರ ಬಗ್ಗೆ ಬಹಳ ಕನಿಕರದಿಂದ ನೋಡಬೇಕಾಗುತ್ತದೆ. ಇವರ ಪ್ರೀಮಿಯಮ್ ಅನ್ನು ಮನ್ನಾ ಮಾಡಬೇಕೆಂದು ನಾನು ಸದನದ ಮೂಲಕ ಮತ್ತು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಗೇಣಿದಾರರು ನಮಗೆ ಓಟು ಕೊಟ್ಟಿದ್ದರೆ ನೀವು ಇರಿಸಿಯೇ ಬರುತ್ತಿರಲಿಲ್ಲ. ನಿಮ್ಮ ಕ್ಷೇತ್ರದಲ್ಲಿ ಗೇಣಿದಾರರು ಇಲ್ಲವೆ ? ಹಾಗೆ ಅಲ್ಲ. ಚುನಾವಣೆಯಲ್ಲಿ ಮಾತುಕೊಟ್ಟ ಪ್ರಕಾರ ಈಗ ಕಾನೂನು ಮಾಡಿದ್ದೇವೆ, ತಿದ್ದುಪಡಿಯನ್ನು ಮಾಡಿದ್ದೇವೆ, ಅದನ್ನು ಜಾರಿಗೆ ತರತಕ್ಕಂಥ ವಿಚಾರವನ್ನು ನಾನು ಹೇಳಿದ್ದೇನೆ ಈಗ ವಸೂಲಿ ಕ್ರಮದಲ್ಲಿ ಏನಾದರೂ ತೊಂದರೆಯಾಗಿದ್ದರೆ ಆರೀತಿ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ನಾನು ಹೇಳಿದ್ದೇನೆ. ಜಪ್ತಿ ಮಾಡತಕ್ಕದ್ದು ಸರಿಯಲ್ಲವೆಂದು ತಾವು ಸಲಹೆಗಳನ್ನು ಕೊಟ್ಟಿದ್ದೀರಿ. ಇದು ೨೦೦ ಟೈಮ್ಸ್ ಅಸೆಸ್‌ಮೆಂಟ್ ಎಂದು ಇದೆ. ಎರಡು ಎಕರೆ ಜಮೀನಿಗೆ ಎಂಟೂ ಆಣೆಯೋ ಒಂದು ರೂಪಾಯಿಯೋ ಕಂದಾಯ ಇರುತ್ತದೆ. ೨೦೦ ಪಟ್ಟು ಎಂದರೆ ೨೦೦ ರೂಪಾಯಿಗಳು ಅಥವಾ ೩೦೦ ರೂಪಾಯಿಗಳನ್ನು ಕೊಡಬೇಕು. ಅದನ್ನೂ ಕಂತುಗಳಲ್ಲಿ ಕೊಡಬೇಕು. ಒಬ್ಬ ರೈತ ಎರಡು ಎಕರೆ ಜಮೀನು ಇದ್ದರೆ ಇನ್ನೂರು ರೂಪಾಯಿ ಕೊಡಬೇಕು. ಅದಕ್ಕೂ ೧೦-೧೫ ಕಂತುಗಳಿವೆ. ವರ್ಷಕ್ಕೆ ೧೫-೩೦ ರೂಪಾಯಿ ಕೊಡತಕ್ಕದ್ದು ಇದೆ. ಇದೇನೂ ದೊಡ್ಡ ಹೊರೆಯಲ್ಲ. ಮತ್ತೆ ಮಾತು ಕೊಟ್ಟಂತೆ ಮುಂದೆ ಕೊಡತಕ್ಕದ್ದಕ್ಕೆ ವಿನಾಯ್ತಿಯನ್ನು ಕೊಟ್ಟಿದ್ದೇವೆ. ದಯವಿಟ್ಟು ತಾವು ಸಹಕರಿಸಬೇಕು.

೨) ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಮಂಡಲಗಳಲ್ಲಿ ಪ್ರತಿ ತಿಂಗಳೂ ೫ ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡಬಾರದೆಂದು ಎಂದು ಟ್ರಜರಿಗೆ ಸರ್ಕಾರ ಆದೇಶ ನೀಡಿರುವುದರಿಂದ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಮಂಡಲಗಳಲ್ಲಿ ಪ್ರತಿ ತಿಂಗಳೂ ೫ ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡಬಾರದು ಎಂದು ಸರ್ಕಾರ ಟ್ರಜರಿಗೆ ಆದೇಶ ನೀಡಿದೆ. ಇದರಿಂದ ಎಲ್ಲಾ ಮಂಡಲಗಳಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) — ಮಾನ್ಯ ಅಧ್ಯಕ್ಷರೇ, ಈ ಬಗ್ಗೆ, ನನ್ನ ಹೇಳಿಕೆ ಈ ರೀತಿ ಇದೆ.

ಮಾನ್ಯ ಸದಸ್ಯರು ಮಂಡಿಸಿರುವ ವಿಷಯ ಸೆಳೆಯುವ ಸೂಚನೆಯಲ್ಲಿ ತಾಂಬ ಅಸ್ಪಷ್ಟವಾಗಿವೆ. ಆದರೂ ಕೂಡ ಜಿಲ್ಲಾ ಪರಿಷತ್ ಕಾಯಿದೆಯಡಿಯಲ್ಲಿರುವ ವ್ಯವಸ್ಥೆಯನ್ನು ಕೆಳಕಂಡಂತೆ ತಿಳಿಸಿದೆ.

ಮೊದಲನೆಯದಾಗಿ ಜಿಲ್ಲಾ ಪರಿಷತ್ ಕಾಯಿದೆಯ ಕಲಂ ೧೧೪ (೩)ರ ಅಡಿಯಲ್ಲಿ ಎಲ್ಲಾ ಮಂಡಲ ಪಂಚಾಯತಿಗಳಿಗೆ ೧೯೮೧ರ ಜನಗಣತಿಯ ಆಧಾರದ ಮೇಲೆ ತಲಾನಂದಾನವನ್ನು ಸರ್ಕಾರದಿಂದ ಜಿಲ್ಲಾ ಪರಿಷತ್‌ಗಳ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ಇದರ ಜೊತೆಗೆ ಮಂಡಲ ಪಂಚಾಯತಿಗಳು ತಮಗೆ ಬರುವ ಆದಾಯವನ್ನು ಸೇರಿಸಿಕೊಂಡು ತಮ್ಮ ಅಡಳಿತಾತ್ಮಕ ವೆಚ್ಚವನ್ನು ಭರಿಸಬೇಕಾಗುತ್ತದೆ. ಎರಡನೆಯದಾಗಿ ಮಂಡಲ ಪಂಚಾಯತಿಯ ವರ್ಗ-೧ ರಲ್ಲಿರುವ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ಜಿಲ್ಲಾ ಪರಿಷತ್‌ಗಳ ಮೂಲಕ ಮಂಡಲ ಪಂಚಾಯತಿಗಳಿಗೆ ಪ್ರತ್ಯೇಕವಾಗಿ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ ಆದ್ದರಿಂದ ಈ ಅಭಿವೃದ್ಧಿ ಕಾರ್ಯಗಳನ್ನು ಸ್ಥಗಿತಗೊಳಿಸುವುದಾಗಲೀ ಅಥವಾ ಕಂಟ್ರಾಕ್ಟ್‌ದಾರರಿಗೆ ಹಣ ಪಾವತಿಯಾಗದಿರುವುದಾಗಲೀ ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರು ಇಂತಹ ತೊಂದರೆಗಳು ಇರುವ ಯಾವುದಾದರೂ ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವಸಂತ ವಿ. ಸಾಲಿಯಾನ. — ಇಲ್ಲಿ ನಾವು ಕೇಳಿರುವ ಪ್ರಶ್ನೆಯೇ ಬೇರೆ, ಕೊಟ್ಟಿರುವ ಉತ್ತರವೇ ಬೇರೆಯಾಗಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ. — ಜಾಸ್ತಿ ಖರ್ಚು ಮಾಡಬಾರದು ಎಂದು ಎಲ್ಲಾ ಮಂಡಲ ಪಂಚಾಯತಿಗಳಿಗೂ.....

ಅಧ್ಯಕ್ಷರು — ತಮಗೆ ಇದು ಸಂಬಂಧ ಇಲ್ಲ

ಶ್ರೀ ಜಿ. ಎಸ್. ಶಿವನಂಜಪ್ಪ.— ಸಂಬಂಧ ಇದೆ.

ಅಧ್ಯಕ್ಷರು.— ನಿಮಗೆ ರೂಲ್ಸ್ ರೆಗ್ಯುಲೇಶನ್ಸ್ ಎಲ್ಲಾ ಓದಿಹೇಳಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆಯನ್ನು ಯಾರು ಹಾಕುತ್ತಾರೋ ಅವರಿಗೆ ಮಾತ್ರ ಅವಕಾಶ ಕೊಡಲಾಗುತ್ತದೆ. ನಿಮಗೆ ಅವಕಾಶ ಕೊಡಬಾರದಾಗಿತ್ತು. ಶ್ರೀ ಬಂಗಾರಪ್ಪನವರು ಗೈರುಹಾಜರಿ ಇದ್ದಕಾರಣ ನಿಮಗೆ ಅವಕಾಶ ಕೊಟ್ಟಿದ್ದೇನೆ. ಯಾರು ಮಾನ್ಯ ಸದಸ್ಯರು ಗಮನ ಸೆಳೆಯುವ ಸೂಚನೆಗೆ ಹೆಸರು ಕೊಟ್ಟಿರುತ್ತಾರೋ ಅವರಿಗೆ ಮಾತ್ರ ಅವಕಾಶ ಇದೆ. ನೀವು ಕುಳಿತುಕೊಳ್ಳಿ.

ಶ್ರೀ ವಸಂತ ವಿ. ಸಾಲಿಯಾನ್.— ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಮಂಡಲಗಳಿಗೆ ಪ್ರತಿತಿಂಗಳೂ ಐದು ಸಾವಿರಕ್ಕಿಂತ ಹೆಚ್ಚು ಖರ್ಚು ಮಾಡಬಾರದೆಂದು ಸರ್ಕಾರದಿಂದ ಆದೇಶ ಬಂದಿದ್ದು ನಿಜ. ಉದಾಹರಣೆಗೆ ಒಂದು ಮಂಡಲದ ಸಿಬ್ಬಂದಿ ವರ್ಗಕ್ಕೆ ವೇತನ ಕೊಡಲಿಕ್ಕೆ ಸುಮಾರು ೬ ಸಾವಿರದ ಎಂಟುನೂರು ರೂಪಾಯಿಗಳು ಬೇಕಾಗುತ್ತದೆ. ಇದರಿಂದ ವೇತನ ಕೊಡಲಿಕ್ಕೆ ಕೆಲವು ಮಂಡಲಗಳಿಗೆ ತೊಂದರೆಯಾಗಿದೆ. ಅದೇರೀತಿಯಲ್ಲಿ ಗ್ರಾಮೀಣ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳು ೫ ಸಾವಿರಕ್ಕಿಂತ ಹೆಚ್ಚು ಆಗುವ ಸಂದರ್ಭ ಇದೆ. ಒಂದು ಗ್ರಾಮೀಣ ರಸ್ತೆ ಆಗಬೇಕಾದರೆ ಸುಮಾರು ೫೦ ಸಾವಿರ ಖರ್ಚು ಆಗಬೇಕಾಗುತ್ತದೆ ಹೀಗಿರುವಾಗ ೫ ಸಾವಿರ ಮಾತ್ರ ಖರ್ಚು ಮಾಡಬೇಕಾಗಿದ್ದರೆ ಯಾವರೀತಿ ಗ್ರಾಮೀಣ ಕೆಲಸಗಳು ಆಗಬೇಕು ? ಒಂದೂ ಕಡೆ ಮಂಡಳಗಳ ಆದಾಯ ಎರಡು ಲಕ್ಷದಷ್ಟಿದೆ ಎನ್ನುತ್ತೀರಿ, ಅಂತಹ ಮಂಡಳಗಳು ತಮ್ಮ ಆದಾಯವನ್ನು ತಮಗಿಷ್ಟಬಂದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಆದೇಶ ಇಲ್ಲದಿದ್ದರೆ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಆದಷ್ಟು ಬೇಗ ಡೈರೆಕ್ಷನ್ಸ್ ಕೊಡಿ ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಮೊದಲನೆಯದಾಗಿ ೫ ಸಾವಿರಕ್ಕಿಂತ ಹೆಚ್ಚಿನ ಹಣ ಇಟ್ಟು ಕೊಳ್ಳಕೂಡದು ಎಂಬ ಆದೇಶ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆಯೇ ಅದು ನನ್ನ ಗಮನಕ್ಕೆ ಬಂದಿಲ್ಲ. ನಾನು ಈ ಸದನ ಸೇರುವುದಕ್ಕಿಂತ ಮುಂಚೆ ಎಲ್ಲ ಜಿಲ್ಲಾಪರಿಷತ್ ಅಧ್ಯಕ್ಷರನ್ನೂ ಕರೆಸಿ ಮಾತನಾಡಿದ್ದೇನೆ. ಅಲ್ಲಿ ಅವರು ೨ ಸಾವಿರ ಖರ್ಚು ಮಾಡುವ ಅಧಿಕಾರ ಇದೆಯೆಲ್ಲ ಅದನ್ನು ಜಾಸ್ತಿ ಮಾಡಬೇಕೆಂದು ಕೇಳಿದರು. ಮಾನ್ಯ ಸದಸ್ಯರು ಹೇಳಿದ ಕಷ್ಟವನ್ನು ನನಗೆ ಹೇಳಲಿಲ್ಲ. ಇವರು ಹೇಳುವುದೇನಾದರೂ ಅಸ್ತಿತ್ವದಲ್ಲಿದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.— ಮಾನ್ಯ ನಜೀರ್ ಸಾಬ್‌ರೇ, ನಿಮ್ಮದು ಲೆಜಿಸ್ಲೇಟರ್ಸ್ ಡಿಪಾರ್ಟ್‌ಮೆಂಟಲ್ ಕನ್‌ಸಲ್ಟೇಟಿವ್ ಕಮಿಟಿ ಎಂದು ಇದೆಯಾಲ್ಲವೇ

ಶ್ರೀ ಅಬ್ದುಲ್ ನಜೀರ್ ಸಾಬ್. — ಹೌದು ಸ್ವಾಮಿ,

ಶ್ರೀ ಅಧ್ಯಕ್ಷರು.— ಎಷ್ಟು ವರ್ಷಕ್ಕೊಂದು ಸಲ ಅದನ್ನು ನೀವು ಕರೆಯುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್.— ವರ್ಷಕ್ಕೆರಡು ಸಲ.

ಅಧ್ಯಕ್ಷರು.— ಹಾಗಾದರೆ ಈ ಸಲ ಮತ್ತೆ ಕರೆಯಿರಿ, ಅವರ ಜೊತೆ ಮಾತನಾಡಿ ಏನಾಯಿತು ಎಂದು ಇವರಿಗೆ ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ಮೊನ್ನೆ ತಾನೇ ಕರೆದಿದ್ದೀನಲ್ಲ ಸ್ವಾಮಿ, ಅಲ್ಲದೆ ಇವರ್ಯಾರೂ ಆದರಲ್ಲಿ ಇರುವುದಿಲ್ಲವಲ್ಲ, ಆಯಿತು, ಶ್ರೀ ವಸಂತ ವಿ. ಸಾಲಿಯಾನ್ ಅವರು ಹೇಳಿದ್ದರ ಬಗ್ಗೆ ನೋಡಿ ಸುತ್ತೇನೆ. ಆ ತರಹ ಏನಾದರೂ ಇದ್ದರೆ ಆದ್ಯತೆ ಮೇಲೆ ಇದಕ್ಕೆ ಪರಿಹಾರವನ್ನು ಕಂಡು ಹಿಡಿಯುತ್ತೇನೆ.

ನಿಯಮ ೩೩೪ರ ಮೇರೆಗೆ

೧) ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯವರಿಂದ ಮುಷ್ಕರ

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರು ತಮ್ಮನ್ನು ವಿದ್ಯಾರ್ಥಿನಿಲಯದಲ್ಲಿ ದಿನಗಳ ತರಹ ರೂಮಿನಲ್ಲಿ ಒಂದು ರೂಮಿಗೆ ಏಳೆಂಟು ಹುಡಿಗಿಯರನ್ನು ಕೂಡುಹಾಕಿ ಅವರಿಗೆ ಕುರ್ಚಿಯಲು ನೀರು, ವಿದ್ಯುಚ್ಛಕ್ತಿಯನ್ನು ಕೂಡ ಕೊಡದೆ ಟೇಬಲ್, ಚೇರ್, ಮಂಚ ಕೊಡದೆ ಫೀಜು ಮಾತ್ರ ಮಾಹೆಯಾನ ೨೮೦ ರೂಪಾಯಿಗಳನ್ನು ವಸೂಲು ಮಾಡುತ್ತಾ ವಿದ್ಯಾರ್ಥಿನಿಯರ ಬಗ್ಗೆ ಅಮಾನುಷವಾಗಿ ವರ್ತಿಸುತ್ತಿರುವ ನೀತಿಯನ್ನು ಪ್ರತಿಭಟಿಸಿ ಚಳುವಳಿ ನಡೆಸಿ ತರಗತಿಗಳಿಗೆ ಬಹಿಷ್ಕಾರ ಹಾಕಿ ಹೋರಾಟದ ಹಾದಿಗೆ ಇಳಿದರೂ ವಿಶ್ವವಿದ್ಯಾನಿಲಯ ಯಾವ ಕ್ರಮವನ್ನೂ ಕೈಗೊಳ್ಳದೆ ನಿರ್ಲಕ್ಷ್ಯ ಮನೋಭಾವವನ್ನು ತೋರುತ್ತಿರುವ ಬಗ್ಗೆ ನಾನು ಪ್ರತಿಭಟಿಸಿ ಮಾನ್ಯ ವ್ಯವಸಾಯ ಮಂತ್ರಿಗಳು ಇದರ ಬಗ್ಗೆ ಕ್ರಮ ಕೈಗೊಂಡು ಸೂಕ್ತ ಪರಿಹಾರ ಕೊಡಬೇಕೆಂದು ಕೋರಿ ಮಾನ್ಯ ಮಂತ್ರಿಗಳ ಹೇಳಿಕೆಗಾಗಿ ಕೋರುತ್ತೇನೆ.

ಶ್ರೀ ಆರ್. ದೇವಪ್ಪಾಂಡೆ (ಕೃಷಿ ಸಚಿವರು).—ಅಧ್ಯಕ್ಷರೇ, ೧೨-೫-೮೮ನೇ ದಿನ ಈ ಘಟನೆಯಾದದ್ದು ನಿಜ. ಅದರ ನಂತರ ನಮ್ಮ ವೈಸ್‌ಚಾನ್ಸಲರ್ ಮತ್ತು ಹಿರಿಯ ಅಧಿಕಾರಿಗಳು ಲೀಡರ್ಸ್ ಮತ್ತು ಲೀಡಿಸ್ ರೆಪ್ರೆಸೆಂಟೆಟೀವ್ಸ್ ಜತೆ ಮಾತನಾಡಿ ಅವರ ಸಮಸ್ಯೆ ಬಗೆಹರಿಸಿದ್ದಾರೆ. ಇಲ್ಲಿ ಏನಾಗಿತ್ತು ಎಂದರೆ ಕೇವಲ ಒಟ್ ಗರ್ಲ್ಸ್‌ಗೆ ಇದ್ದ ಆಕಾಮಡೇಷನ್‌ನಲ್ಲಿ ಕಳೆದರೆಡು ವರ್ಷದಲ್ಲಿ ಅಡ್ಮಿಷನ್ಸ್ ಜಾಸ್ತಿ ಆಗಿ ೧೬೦ಕ್ಕೆ ಏರಿತ್ತು. ಈಗ ನಾವು ಹಾಸ್ಟೆಲ್ ಮತ್ತು ಆಫೀಸಿಯಲ್ ಕ್ವಾರ್ಟ್ರಸ್ ಏನಿವೆ, ಅವನ್ನೆಲ್ಲ ಇವರಿಗೆ ಆಕಾಮಡೇಟ್ ಮಾಡಿಕೊಡುತ್ತಿದ್ದೇವೆ. ನೀರಿನ ಪ್ರಾಬ್ಲಂ ಆ ದಿವಸ ಇತ್ತು. ಏಕೆಂದರೆ ಬಿಡಬ್ಲ್ಯುಎಸ್‌ಎಸ್‌ಬಿ ಯವರು ನೀರನ್ನು ನಿಲ್ಲಿಸಿದ್ದರಿಂದ ಮತ್ತು ಬೋರ್‌ವೆಲ್ ಕೈಕೊಟ್ಟಿದ್ದರಿಂದ ಪ್ರಾಬ್ಲಮ್ ಆಗಿತ್ತು. ಈಗ ಅವನ್ನು ಪರಿಹರಿಸಿದ್ದೇವೆ.

೨) ರಾಜ್ಯದಲ್ಲಿ ನಿಜವಾದ ರೈತರಿಗೆ ಭೂಮಿಯ ಹಕ್ಕನ್ನು ಕೊಡುವುದು ಮತ್ತು ಭೂಮಿ ಕಳೆದುಕೊಂಡವರಿಗೆ ಪರಿಹಾರವನ್ನು ಜಾಗ್ರತೆ ಕೊಡುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಉಳುವ ಒಕ್ಕಲಿಗೆ ಭೂಮಿಯ ಹಕ್ಕು ಕೊಡುವುದು, ಭೂಮಿಯ ಒಡೆತನ ಕಳೆದುಕೊಂಡವರಿಗೆ ಪರಿಹಾರ ನೀಡುವುದು ಇವು ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಮೂಲ ಉದ್ದೇಶ. ಈ ಕೆಲಸ ಹೆಚ್ಚಿನ ಕಡೆ ಆಗಿದೆ. ಕೆಲವು ಕಡೆ ತನಿಸಿ ಮರು ತನಿಖೆ ನಡೆಯುತ್ತಿದೆ ಆದರೆ ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಮಲ್ಲೂರು ಗ್ರಾಮದ ಸರ್ವೆ ನಂ. ೧೦೫ ಮತ್ತು ೧೦೬ ಕ್ಕೆ ಹಕ್ಕು ಪಡೆಯಲು ಅರ್ಜಿ ಸಲ್ಲಿಸಿದ ಐದು ಮಂದಿ ಒಕ್ಕಲುಗಳ ಪ್ರಕರಣ ತನಿಖೆ ಆಗದೆ ಚನ್ನಪಟ್ಟಣ ಭೂನ್ಯಾಯಮಂಡಳಿಯಲ್ಲಿ ೧೯೭೬ ರಲ್ಲಿ ಫೈಲ್ ಆಗಿರುವುದಾಗಿ ತಿಳಿದುಬಂದಿದೆ. ಇದರಿಂದ ನಿಜವಾಗಿ ಒಕ್ಕಲಾಗಿ ಭೂಸ್ವಾಧೀನ ಹೊಂದಿದ್ದ ಇವರಿಗೆ ಭೂಮಿಯ ಹಕ್ಕಿಲ್ಲ, ಭೂಮಿ ಕಳೆದುಕೊಂಡ, ದೇಣಿ ಪಡೆಯುವ ಧನಿಗೆ ಪರಿಹಾರವೂ ಇಲ್ಲ